**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 158 ಟಿಎನ್ ಆರ್ 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:09-09-2020

# ತಿದ್ದುಪಡಿ ಆದೇಶ

ಸಾರ್ವಜನಿಕ ಉದ್ಯಾನವನಗಳು ಮತ್ತು ಉದ್ಯಾನವನದೊಳಗಿನ ಕೋವಿಡ್ ಪೂರ್ವದಲ್ಲಿ ಬಳಕೆಯಲ್ಲಿದ್ದ ರಸ್ತೆಗಳನ್ನು ಸಾರ್ವಜನಿಕರ ಮುಕ್ತ ಪ್ರವೇಶಕ್ಕೆ ಅನುಮತಿಸಿ ದಿನಾಂಕ:08.09.2020 ರಂದು ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ: ಕಂಇ 158 ಟಿಎನ್ಆರ್ 2020 ರಲ್ಲಿನ ಖಂಡಿಕೆ(4) ಮತ್ತು (5)ನ್ನು ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು:

4. ಪ್ರಸ್ತುತ, ಕೇಂದ್ರ ಗೃಹ ಮಂತ್ರಾಲಯದ ಆದೇಶವನ್ನು ಅನುಸರಿಸಿ, ರಾಜ್ಯಸರ್ಕಾರವು ತೆರವು-4ರ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಸದರಿ ಮಾರ್ಗಸೂಚಿಗಳು ದಿನಾಂಕ:30.09.2020 ರವರೆಗೆ ಜಾರಿಯಲ್ಲಿರುತ್ತವೆ. ಈ ಅವಧಿಯಲ್ಲಿ ಮತ್ತು ಮುಂದಿನ ಆದೇಶದವರೆಗೆ ಕಂಟೈನ್‌ಮೆಂಟ್ ವಲಯಗಳನ್ನು ಹೊರತುಪಡಿಸಿ ಇತರೆ ಎಲ್ಲಾ ವಲಯಗಳಲ್ಲಿನ ಸಾರ್ವಜನಿಕ ಉದ್ಯಾನವನಗಳು ಮತ್ತು ಉದ್ಯಾನವನದೊಳಗಿನ ಕೋವಿಡ್ ಪೂರ್ವದಲ್ಲಿ **ವಾಹನ ಸಂಚಾರ ಮತ್ತು ಪಾದಚಾರಿಗಳ ಚಲನೆಗೆ** ಬಳಕೆಯಲ್ಲಿದ್ದ ರಸ್ತೆಗಳನ್ನು ಸಂಪೂರ್ಣವಾಗಿ ಸಾರ್ವಜನಿಕರಿಗೆ ಮುಕ್ತಗೊಳಿಸಲು ಅಂದರೆ, ಲಾಕ್‌ಡೌನ್ ಅವಧಿಯ ಪೂರ್ವದ ಸ್ಥಿತಿಯಲ್ಲಿದ್ದಂತೆ ಮುಂದುವರೆಸಿ ಆದೇಶಿಸಿದೆ.

5. ಕೋವಿಡ್-19 ಸೋಂಕು ನಿಯಂತ್ರಿಸುವ ಸಂಬಂಧದಲ್ಲಿ ಹೊರಡಿಸಿದ ರಾಷ್ಟ್ರೀಯ ನಿರ್ದೇಶನಗಳನ್ನು ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ, ಸಂಬಂಧಿಸಿದ ಇಲಾಖೆಗಳು ಮತ್ತು ಪ್ರಾಧಿಕಾರಗಳು ಸಾರ್ವಜನಿಕ ಉದ್ಯಾನವನಗಳನ್ನು ಮತ್ತು ಅದರೊಳಗಿನ ಕೋವಿಡ್ ಪೂರ್ವದಲ್ಲಿ **ವಾಹನ ಸಂಚಾರ ಮತ್ತು ಪಾದಚಾರಿಗಳ ಚಲನೆಗೆ** ಬಳಕೆಯಲ್ಲಿದ್ದ ರಸ್ತೆಗಳನ್ನು ಸಾರ್ವಜನಿಕರ ಮುಕ್ತ ಪ್ರವೇಶಕ್ಕೆ ಅನುಮತಿಸತಕ್ಕದ್ದು.

**(ಕೆ. ಉಮಾಪತಿ)**
ಸರ್ಕಾರದ ಜಂಟಿ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ನೋಂ. & ಮು.)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.